ಮಾಡುವ ಉದ್ದೇಶದಿಂದ ಅರಿವಿಲ್ಲದೆ ತಮ್ಮ ಮಗುವಿನ ಮುಗ್ಧತೆಯ ಮೇಲೆ ಸವಾರಿ ಮಾಡಿರಬಹುದು. ಅವರನ್ನು ಜೂಜಿನ ಕುದುರೆಯಂತೆ ಓಡಿಸುವ ಧಾವಂತದಲ್ಲಿ ಅವರ ಕನಸುಗಳನ್ನು ಚಿವುಟಿರುವುದೂ ಸಾಧ್ಯ. ಸ್ಪರ್ಧಾತ್ಮಕ ಜಗತ್ತಿನಲ್ಲಿ ನಮ್ಮ ಮಕ್ಕಳು ಹಿಂದುಳಿಯಬಾರದು ಎಂಬ ಕಾಳಜಿ ಸರಿ, ಆದರೆ 'ನನಗಂತೂ ಆಗಲಿಲ್ಲ, ನೀನಾದರೂ ಮಾಡಲೇಬೇಕು' ಎಂದು ತಮ್ಮ ಕನಸುಗಳನ್ನು ತಮ್ಮ ಮಕ್ಕಳ ಮೇಲೆ ಹೇರುವುದು ಪೋಷಕರಲ್ಲಿ ಬಹಳ ಸಾಮಾನ್ಯವಾಗಿದೆ. ತಮ್ಮ ತಂದೆ ತಾಯಿಯರ ಕನಸುಗಳನ್ನು ಹೊತ್ತು, ಅವುಗಳನ್ನು ಈಡೇರಿಸಲು ನಡೆಸುವ ಹೋರಾಟದಲ್ಲಿ ಕೆಲವು ಮಕ್ಕಳು ಯಶಸ್ವಿಯೂ ಆಗಬಹುದು. ಆದರೆ, ಬಹಳಷ್ಟು ಕಡೆ ಹೆತ್ತವರ ನಿರೀಕ್ಷೆಗಳು ಮಕ್ಕಳ ಹೆಗಲ ಮೇಲೆ ಮತ್ತು ಅವರ ಕನಸುಗಳ ಮೇಲೆ ಹೊರೆಯಾಗುತ್ತವೆ. ಇಂಥ ಒತ್ತಡಗಳಿಂದ ನಿದ್ದೆಗೆಟ್ಟ ಮಕ್ಕಳು ತಮ್ಮ ಸ್ವಂತದ ಕನಸು ಕಾಣಬಲ್ಲರೇ?

ಇಲ್ಲಿ ಖಲೀಲ್ ಗಿಬ್ರಾನ್ ಅವರ ಒಂದು ಪ್ರಸಿದ್ಧ ಕವಿತೆಯಲ್ಲಿ ಒಬ್ಬ ಮಹಿಳೆ ತನ್ನ ಮಗುವನ್ನೆತ್ತಿಕೊಂಡು ಸಾಧುವಿನ ಬಳಿ ಹೋಗಿ ಮಕ್ಕಳ ಬೆಳೆಸುವ ಬಗ್ಗೆ ತನಗೆ ಮಾರ್ಗದರ್ಶನ ಕೊಡಿ ಎಂದು ಕೇಳುತ್ತಾಳೆ. ಆಗ ಆ ಗುರು ಈ ರೀತಿ ಉತ್ತರಿಸುತ್ತಾನೆ:

'ನಮ್ಮ ಮಕ್ಕಳು ನಿಜವಾಗಿಯೂ ನಮ್ಮ ಮಕ್ಕಳಲ್ಲ
ಏಕೆಂದರೆ, ಅವರು ಜೀವನದ ಪ್ರೀತಿಯ ಕುರುಹುಗಳು
ಅವು ನಮ್ಮ ಮೂಲಕ ಹುಟ್ಟಿವೆ ಹೊರತು ನಮ್ಮಿಂದಲ್ಲ
ಅವರು ನಮ್ಮ ಬಳಿ ಇರುತ್ತಾರೆ ಹೊರತು ನಮ್ಮ ಸ್ವತ್ತಲ್ಲ
ನಾವು ಅವರಿಗೆ ಪ್ರೀತಿ ಕೊಡಬಹುದೇ ಹೊರತು ನಮ್ಮ ಯೋಚನೆಗಳನಲ್ಲ'

ಹೀಗೇ ಆಗು ಎಂದು ಕನಸನ್ನು ಹೇರುವುದರ ಬದಲು ಮಕ್ಕಳಿಗೆ ಜಗತ್ತಿನಲ್ಲಿ ಇರುವ ವೈವಿಧ್ಯಮಯ ಸಾಧ್ಯತೆಗಳ ಬಗ್ಗೆ ತಿಳಿವಳಿಕೆ ನೀಡಬೇಕು. ಮಕ್ಕಳ ಒಲವು ಯಾವ ಕಡೆ ಇದೆ ಎಂದು ತಿಳಿದುಕೊಳ್ಳುವುದು ಬಹಳ ಅಗತ್ಯ. ಅವರು ತಮ್ಮದೇ ಆದ ವೃತ್ತಿಜೀವನದ ಹಾದಿಯನ್ನು ಕಂಡುಕೊಳ್ಳಲಿ. ಅವರು ತಮ್ಮದೇ ಆದ ಕನಸುಗಳನ್ನು ಅನುಸರಿಸಲಿ ಮತ್ತು ತಮ್ಮದೇ ಆದ ಆಕಾಂಕ್ಷೆಗಳಿಂದ ಚಿತ್ರಿಸಿದ ಆಕಾಶದಲ್ಲಿ ಹಾರಲಿ. (ಹಾಗಿದ್ದೂ ಒಂದು ಮಾತು ಹೇಳಬೇಕು, ಪ್ರಸ್ತುತ ಜಗತ್ತಿಗೆ ಕೊರೊನಾ ಅಂಟಿಕೊಂಡಿದೆ. ಮಕ್ಕಳಿಗೆ ಬೇಕಾಗಿತ್ತೋ ಬೇಡವಾಗಿತ್ತೋ ಅವರಿಗೆ ವೈದ್ಯಕೀಯ ಶಿಕ್ಷಣ ಕೊಡಿಸಿ ಡಾಕ್ಟರ್ ಮಾಡಿದ ಪೋಷಕರಿಗೆ ನನ್ನ ಸಲಾಂ! ನಿಮ್ಮ ಕನಸುಗಳು ನಮ್ಮನ್ನು ಕಾಯ್ದವು!)

ಐಐಟಿ, ಎಂಜಿನಿಯರಿಂಗ್ ಓದದೇ ಇದ್ದರೆ ನೀವು ಮನುಷ್ಯರೇ ಅಲ್ಲ ಎಂಬ ರೀತಿಯ ಧೋರಣೆಯ ಪೋಷಕರು ಒಂದೆಡೆ. ಅಭಿರುಚಿಯ ಅರಿವಿಲ್ಲದೆ ಗಾಣದ ಎತ್ತಿನಂತೆ ಓದುವ ಮಕ್ಕಳು ಇನ್ನೊಂದೆಡೆ. ಇಂಥ ವಾತಾವರಣದಲ್ಲಿ ಭಾವನೆಗಳಿಗೆ, ಕುಟುಂಬ ಪ್ರೀತಿಗೆ ಏನು ಬೆಲೆ? ಯಂತ್ರದಂತೆ ಜೀವಿಸುವ ಇಂಥ ಅನೇಕರು ಬಹಳಷ್ಟು ಬಾರಿ ಖಿನ್ನತೆಯ ಕಂದಕಕ್ಕೆ ಬಿದ್ದು ಜೀವ ತೆಗೆದು ಕೊಳ್ಳುತ್ತಾರೆ. ರಾಜಸ್ಥಾನದ ಪುಟ್ಟ ಪಟ್ಟಣ ಕೋಟಾದಲ್ಲಿ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡ ಹುಡುಗಿ ತನ್ನ ತಾಯಿಗೆ ಹೀಗೆ ಬರೆದಿದ್ದಳು: "ನನ್ನ ಇಷ್ಟ ಅನಿಷ್ಟ ನೀವು ನೋಡಲಿಲ್ಲ, ನಾನು ವಿಜ್ಞಾನ ಓದುವಂತೆ ಮಾಡಿದಿರಿ. ನಾನಾದರೂ ಅದೇ ನನ್ನ ಇಷ್ಟ ಎಂದು ಹುಸಿಯಾಗಿ ನಂಬಿಕೊಳ್ಳುತ್ತಾ ನನ್ನ ಕನಸುಗಳನ್ನು ಕಳೆದುಕೊಂಡೆ." ಹೀಗೆ ತಮಗೆ ಇಷ್ಟವಾಗದ ಎಂಜಿನಿಯರಿಂಗ್ ಅನ್ನೋ, ವೈದ್ಯಕೀಯವನ್ನೋ ಓದಲು ಹೋಗಿ ಕಂಗೆಟ್ಟು ಕಮರಿಹೋದ ಜೀವಗಳೆಷ್ಟೋ.

ಯಕ್ಷಗಾನ ಕಲಾವಿದ ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರ ಆತ್ಮಕಥನದಲ್ಲಿ ಒಂದು ಘಟನೆಯಿದೆ. ಶಾಲೆ ತಪ್ಪಿಸಿ ಎಲ್ಲೋ ತೋಟದಲ್ಲಿ ಮರಗಳ ಮಧ್ಯೆ ತಾನೇ ನಿರ್ಮಿಸಿದ ವೇದಿಕೆಯ ಮೇಲೆ ಬಾಲಕ ಚಿಟ್ಟಾಣಿ ಯಕ್ಷಗಾನ ಕುಣಿಯುತ್ತಿದ್ದನಂತೆ. ಇದನ್ನು ಕಂಡ ಶಾಲೆಯ ಮಾಸ್ತರು ರಾಮಚಂದ್ರನ